**ದಿನಾಂಕಃ 02/09/2025 ರಂದು ಅಸಾಃ ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ ಮಾನ ಸ.ಅ. ರವರಿಂದಃ

4. ನನ್ನ ಮಗ ಕಾಣೆಯಾಗಿದ್ದರಿಂದ ನಾನು ಈ ಬಗ್ಗೆ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

5. ದೂರು ಕೊಟ್ಟ ನಂತರ ಪೊಲೀಸರು ಹುಡುಕಾಡಿರುತ್ತಾರೆ. ಬೈಕ್ ಹೊಳೆ ಹತ್ತಿರ ಇತ್ತು. ಶವ ಸಿಕ್ಕಿರಲಿಲ್ಲ. ಪೊಲೀಸರು ಸ್ಥಳದಲ್ಲಿ ಮಹಜರನ್ನು ಮಾಡಿ ಬೈಕನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಬೈಕ್ ನನ್ನ ಮಗ ರವಿಕುಮಾರ್ ಗೆ ಸೇರಿರುತ್ತದೆ. ಬೈಕಿನ ನಂಬರ್ ಕೆಎ-13-1816 ಇರುತ್ತದೆ.

6. ದಿ. 10.10.2023 ರಂದು ಬೆಳಿಗ್ಗೆ 8.00 ಗಂಟೆ ಗನ್ನಿಕಡದ ಹೇಮಾವತಿ ನದಿಯ ದಂಡೆಯ ಮೇಲೆ ಶವ ಸಿಕ್ಕಿರುತ್ತದೆ. ಶವವನ್ನು ಗುರುತಿಸಿರುತ್ತೇನೆ. ಈ ಬಗ್ಗೆ ನಾನು ದಿ. 10.10.2023 ರಂದು ದೂರನ್ನು ನೀಡಿರುತ್ತೇನೆ. ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

7. ದಿ. 11.10.2023 ರಂದು ದೂರು ಪಡೆದ ನಂತರ ಶವ ಸಿಕ್ಕ ಜಾಗದಲ್ಲಿ ಪೊಲೀಸರು ಮಹಜರ್ ಮಾಡಿರುತ್ತಾರೆ. ಮಹಜರನ್ನು ಬೆಳಿಗ್ಗೆ 8.00-9.00 ಗಂಟೆ ತನಕ ಮಾಡಿರುತ್ತಾರೆ. ಸಾಕ್ಷಿ ಮಹಜರಿನಲ್ಲಿ ಸಾಕ್ಷಿ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪೊಲೀಸರಿಗೆ ಸ್ಥಳವನ್ನು ನಾನು ತೋರಿಸಿರುತ್ತೇನೆ. ಮಹಜರಿ ಸಮಯದಲ್ಲಿ ಚಾಸಾ-9 ಮತ್ತು 10 ರವರು ಸಹಾ ಹಾಜರಿದ್ದು ಅವರು ಮಹಜರಿಗೆ ಸಹಿ ಮಾಡಿರುತ್ತಾರೆ. ಪೊಲೀಸರು ಮಹಜರ್ ಸಮಯದಲ್ಲಿ ಪೊಟೋ ತೆಗೆದಿರುತ್ತಾರೆ. ಸಾಕ್ಷಿಗೆ ಪೊಟೋವನ್ನು ತೋರಿಸಲಾಗಿ, ಸಾಕ್ಷಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಅ, ರವರು ಬಣ್ಣದ ಪೊಟೋ ಮತ್ತು ಸಿಡಿಯನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಸಿಡಿಯನ್ನು ಬೆರಳಚ್ಚುಗಾರರ ಮುಖಾಂತರ ಹಾಕಿ

ನೋಡಿದಾಗ ಅದು ಖಾಲಿ ಸಿಡಿ ಇದ್ದು, ಫೋಟೋ ಇಮೇಜಸ್ ಗಳು ಇರುವುದಿಲ್ಲ. ಬಣ್ಣದ ಫೋಟೋ ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ, ಆದ್ದರಿಂದ ಸಾಕ್ಷ್ಯ ಅಧಿನಿಯಮದ ಪ್ರಕಾರ ಸಿಡಿ ಮತ್ತು ಪ್ರಮಾಣ ಪತ್ರ ಕೊಡದೇ ಇರುವುದರಿಂದ, ಬಣ್ಣದ ಫೋಟೋಗಳನ್ನು ಗುರುತಿಸಬೇಕೆಂಬ ಮಾನ್ಯ ಸ.ಅ. ರವರ ಮನವಿಯನ್ನು ತಳ್ಳಿಹಾಕಲಾಯಿತು)

8. ಪೊಲೀಸರು ಅದೇ ದಿನ ನಮ್ಮ ಮನೆಯ ಹತ್ತಿರ ಬಂದು ಮಹಜರ್ ಮಾಡಿರುತ್ತಾರೆ. ನನ್ನ ಮಗ ಹಾಗೂ 2ನೇ ಆರೋಪಿಯವರು ವಾಸ ಮಾಡುವ ಮನೆಯ ಹತ್ತಿರ ಬಂದು ಪೊಲೀಸರು ಮಹಜರ್ ಮಾಡಿರುತ್ತಾರೆ. ನಾನೇ ಪೊಲೀಸರಿಗೆ ಸ್ಥಳವನ್ನು ತೋರಿಸಿದ್ದು, ಚಾಸಾ-9 ಮತ್ತು 10 ರವರು ಸಹ ಮಹಜರಿನಲ್ಲಿ ಹಾಜರಿದ್ದರು. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಬೆಳಿಗ್ಗೆ 10-11 ಗಂಟೆ ತನಕ ಮಾಡಿರುತ್ತಾರೆ. ಪೊಲೀಸರು ಮಹಜರ್ ಸಮಯದಲ್ಲಿ ಫೋಟೋ ತೆಗೆದಿರುತ್ತಾರೆ. ಸಾಕ್ಷಿಗೆ ಫೋಟೋವನ್ನು ತೋರಿಸಲಾಗಿ, ಸಾಕ್ಷಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಅ, ರವರು ಬಣ್ಣದ ಫೋಟೋ ಮತ್ತು ಸಿಡಿಯನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಸಿಡಿಯನ್ನು ಬೆರಳಚ್ಚುಗಾರರ ಮುಖಾಂತರ ಹಾಕಿ ನೋಡಿದಾಗ ಅದು ಖಾಲಿ ಸಿಡಿ ಇದ್ದು, ಫೋಟೋ ಇಮೇಜಸ್ ಗಳು ಇರುವುದಿಲ್ಲ. ಬಣ್ಣದ ಫೋಟೋ ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ, ಆದ್ದರಿಂದ ಸಾಕ್ಷ್ಯ ಅಧಿನಿಯಮದ ಪ್ರಕಾರ ಸಿಡಿ ಮತ್ತು ಪ್ರಮಾಣ ಪತ್ರ ಕೊಡದೇ ಇರುವುದರಿಂದ, ಬಣ್ಣದ ಫೋಟೋಗಳನ್ನು ಗುರುತಿಸಬೇಕೆಂಬ ಮಾನ್ಯ ಸ.ಅ. ರವರ ಮನವಿಯನ್ನು ತಳ್ಳಿಹಾಕಲಾಯಿತು)

9. ಅದೇ ದಿನ ಸಂಜೆ 5.00 ಗಂಟೆಗೆ ಡಿವೈಎಸ್‌ಪಿ ಕಚೇರಿಗೆ ನನ್ನ ಮಗ ಮೊಬೈಲ್ ಬಿಟ್ಟು ಹೋಗಿದ್ದ ಅದನ್ನು ಕೊಡಲು ಹೋಗಿರುತ್ತೇನೆ. ಪೊಲೀಸರು ಅಲ್ಲಿ ಮೊಬೈಲ್ ಅಮಾನತುಪಡಿಸಿಕೊಳ್ಳಲು ಮಹಜರ್ ಮಾಡಿರುತ್ತಾರೆ. ನಾನಲ್ಲದೇ ಚಾಸಾ-11 ಮತ್ತು 12 ರವರು ಸಹ ಹಾಜರಿದುದ, ಅವರು ಕೂಡ ಮಹಜರಿಗೆ ಸಹಿ ಮಾಡಿರುತ್ತಾರೆ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಂಜೆ 5.00-6.00 ಗಂಟೆ ಮಹಜರ್

ಮಾಡಿರುತ್ತಾರೆ. ನನ್ನ ಮಗನ ಮೊಬೈಲ್ ನಂಬರ್ 9743795276 ಆಗಿದ್ದು, ಅದು ವಿವೋ ಕಂಪನಿಯ ಮೊಬೈಲ್ ಆಗಿರುತ್ತದೆ.

( ಈ ಹಂತದಲ್ಲಿ ಮಾನ್ಯ ಸ.ಅ. ರವರು ಸೀಲ್ ಮಾಡಿ ಪ್ಯಾಕ್ ಮಾಡಿರುವ ಮೊಬೈಲ್‌ನ್ನು ತೆರೆಯಲು ನ್ಯಾಯಾಲಯದ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

10. 1ನೇ ಆರೋಪಿ 2ನೇ ಆರೋಪಿ ಅಶ್ಲೀಲವಾಗಿ ನಡೆದುಕೊಂಡ ಬಗ್ಗೆ ನನ್ನ ಮಗ ಅದನ್ನು ರೆಕಾರ್ಡ ಮಾಡಿದ್ದು, ಮೊಬೈಲ್‌ನ್ನು ಪೊಲೀಸರು ಅಮಾನತುಪಡಿಸಿಕೊಂಡಿರುತ್ತಾರೆ. ಪೊಲೀಸರು ಮಹಜರ್ ಸಮಯದಲ್ಲಿ ಪೊಟೋ ತೆಗೆದಿರುತ್ತಾರೆ. ಸಾಕ್ಷಿಗೆ ಪೊಟೋವನ್ನು ತೋರಿಸಲಾಗಿ, ಸಾಕ್ಷಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸ.ಅ, ರವರು ಬಣ್ಣದ ಪೊಟೋ ಮತ್ತು ಸಿಡಿಯನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಸಿಡಿಯನ್ನು ಬೆರಳಚ್ಚುಗಾರರ ಮುಖಾಂತರ ಹಾಕಿ ನೋಡಿದಾಗ ಅದು ಖಾಲಿ ಸಿಡಿ ಇದ್ದು, ಪೊಟೋ ಇಮೇಜಸ್ ಗಳು ಇರುವುದಿಲ್ಲ. ಬಣ್ಣದ ಪೊಟೋ ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ, ಆದ್ದರಿಂದ ಸಾಕ್ಷ್ಯ ಅಧಿನಿಯಮದ ಪ್ರಕಾರ ಸಿಡಿ ಮತ್ತು ಪ್ರಮಾಣ ಪತ್ರ ಕೊಡದೇ ಇರುವುದರಿಂದ, ಬಣ್ಣದ ಪೊಟೋಗಳನ್ನು ಗುರುತಿಸಬೇಕೆಂಬ ಮಾನ್ಯ ಸ.ಅ. ರವರ ಮನವಿಯನ್ನು ತಳ್ಳಿಹಾಕಲಾಯಿತು)

**(ಈ ಹಂತದಲ್ಲಿ ಮಾನ್ಯ ಸ.ಅ. ರವರು ಮುಂದುವರಿದ ಮುಖ್ಯ ವಿಚಾರಣೆಗೆ ವೇಳೆ ಕೇಳಿದ್ದು, ವೇಳೆ ನೀಡಲಾಯಿತು)**

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ